(ಇಂದು ದಿನಾಂಕ 23-08-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಬಿ.ಎಸ್.ಯು. ವಕೀಲರಿಂದ–**

6. ನಾನು ಮೂಡಂಗಿ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ನ್ಯಾ..ಕ್ಕೆ ದಾಖಲೆ ಹಾಜರಪಡಿಸಿರುತ್ತೇನೆ. ಯಾವ ದಾಖಲೆ ಎಂದರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲ ಎನ್ನುತ್ತಾರೆ. ನಾನು ಮೂಡಂಗಿ ಗ್ರಾಮದಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಯಾವುದೇ ದಾಖಲೆಯನ್ನು ನ್ಯಾಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ.



7. ನನ್ನ ಸಾಕು ತಂದೆ ಎಂದು ಹೇಳುವ ಅನಂತ ಹರಿಕಂತ್ರ ಇವರ ತಂದೆ – ತಾಯಿಯ ಹೆಸರು ಗೊತ್ತಿದೆಯೇ ಎಂದರೆ ಸಾಕ್ಷಿ, ತಂದೆಯ ಹೆಸರು ಕಾಂಜಾ ಮತ್ತು ತಾಯಿಯ ಹೆಸರು ಗೊತ್ತಿಲ್ಲ ಎನ್ನುತ್ತಾರೆ . ನಿ.ಪಿ. 11 ರಲ್ಲಿ ಅನಂತ ಹರಿಕಂತ್ರ ಇವರ ವಿಳಾಸ ಗೋಕರ್ಣ ಗ್ರಾಮ ಎಂದು ನಮೂದಾಗಿದೆ ಎಂದರೆ ಸಾಕ್ಷಿ ಅವರು ನಮ್ಮ ಮನೆಯಲ್ಲಿಯೇ ಇದ್ದರು ಎನ್ನುತ್ತಾರೆ. ನನ್ನ ಮನೆಯ ನಂ. 104 ರಲ್ಲಿ ಸದ್ರಿ ಅನಂತ ಹರಿಕಂತ್ರ ಇವರು ಮನೆ ನಂ . 104 ಎ ಅಥವಾ 104 ಬಿ ರಲ್ಲಿ ವಾಸವಿದ್ದರು ಎನ್ನುತ್ತಾರೆ. ನಾನು ಹಾಜರಪಡಿಸಿರುವ ನಿ.ಪಿ. 12 ರಲ್ಲೂ ಕೂಡ ಅನಂತ ಹರಿಕಂತ್ರ ಇವರ ವಿಳಾಸ ಗೋಕರ್ಣ ಗ್ರಾಮ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ.

8. ನಿ.ಪಿ. 13 ಮತ್ತು14 ದಾಖಲಾತಿಗಳನ್ನು ಯಾಕೆ ಹಾಜರಪಡಿಸಿದ್ದೇನೆ ಎಂದು ಗೊತ್ತಿಲ್ಲ . ನಿ.ಪಿ. 15 ರಲ್ಲಿ ಅನಂತ ಹರಿಕಂತ್ರ ಇವರ ವಿಳಾಸ ತದಡಿ ಗೋಕರ್ಣ ಗ್ರಾಮ ಎಂದು ನಮೂದಾಗಿದೆ ಎಂದರೆ ಸಾಕ್ಷಿ ಸದ್ರಿ ಸ್ಥಳ ಮೂಡಂಗಿ ಹತ್ತಿರ ಇದೆ ಎನ್ನುತ್ತಾರೆ.

9. ಪ್ರತಿವಾದಿಯ ಹೆಸರು ಪಹಣಿಪತ್ರಿಕೆಯಲ್ಲಿ ನಮೂದಾದ ಬಗ್ಗೆ ನಾನು ಕಂದಾಯ ಮೇಲ್ಮನವಿ ಸಲ್ಲಿಸಿರುತ್ತೇನೆ . ಈ ಬಗ್ಗೆ ದಾಖಲೆ ಹಾಜರಪಡಿಸಿರುತ್ತೇನೆ . ಅನಂತ ಹರಿಕಂತ್ರ ಇವರು ನನ್ನ ಮತ್ತು ನನ್ನ ಮಗನ ಹೆಸರಿಗೆ ಯಾವುದೇ ಮೃತ್ಯುಪತ್ರವನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಸದ್ರಿ ದಾಖಲೆಯನ್ನು ನಾನು ಸೃಷ್ಟಿಸಿ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ವಾದ ಪತ್ರದಲ್ಲಿ ಕಾಣಿಸಿದಂತೆ ಯಾವತ್ತೂ ಅನಂತ ಇವರ ದೇಖರೇಖಿ ಮಾಡಿಲ್ಲ ಮತ್ತು ಅಂತ್ಯ ಸಂಸ್ಕಾರ ನೆರವೇರಿಸಿಲ್ಲ ಎಂದರೆ ಸರಿಯಲ್ಲ . ನಾನು ವಾದ ಪತ್ರದಲ್ಲಿ ಕಾಣಿಸಿದಂತೆ ದಿನಾಂಕ 21-04-1989 ರ ಮೃತ್ಯುಪತ್ರದಂತೆ ನಮಗೆ ಯಾವುದೇ ಹಕ್ಕು ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ